327 (41) ಶ್ರೀ ರವಿ ಸಿ.ಟಿ.(ಚಿಕ್ಕಮಗಳೂರು):– ಸನ್ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿರುವ ಅಕಾಡೆಮಿಗಳ ಸಂಖ್ಯೆ ಎಷ್ಟು? ಇವುಗಳನ್ನು ಯಾವಾಗ ರಚನೆ ಮಾಡಲಾಯಿತು. ಇವುಗಳ ಉದ್ದೇಶವೇನು?

2) ಈ ಎಲ್ಲಾ ಅಕಾಡೆಮಿಗಳಿಗೆ ಅಧ್ಯಕ್ಷ–ಸದಸ್ಯರ ನೇಮಕ ಮಾಡಲಾಗಿದೆಯೇ? ಇಲ್ಲದಿದ್ದಲ್ಲಿ ಯಾವಾಗ ಮಾಡಲಾಗುವುದು

3) ಸದರಿ ಅಕಾಡೆಮಿಗಳಿಗೆ ನೇಮಿಸುವ ಮಾನದಂಡಗಳೇನು? ಇದು ಈಗ ನೆನೆಗುದಿಗೆ ಬೀಳಲು ಕಾರಣವೇನು?

4) ಹಾಲಿ ಇರುವ ಅಕಾಡೆಮಿಗಳ ಜೊತೆಗೆ ಹೊಸ ಅಕಾಡೆಮಿಗಳನ್ನು ರಚಿಸಲು ಸರ್ಕಾರ ಉದ್ದೇಶಿಸಿದೆಯೇ? ಈಗ ಇರುವ ಅಕಾಡೆಮಿಗಳಿಗೆ ಹಣಕಾಸಿನ ಕೊರತೆ ಇರುವಾಗ ಹೊಸ ಅಕಾಡೆಮಿಗಳ ಅಗತ್ಯವಿದೇಯೇ?

5) ಈ ನೂತನ ಅಕಾಡೆಮಿಗಳಾವುವು?

ಶ್ರೀ ಎನ್. ಧರ್ಮಸಿಂಗ್ ಮುಖ್ಯಮಂತ್ರಿಗಳು:

1) ಅಕಾಡೆಮಿಗಳ ಸಂಖ್ಯೆ 10

ಹೆಸರು	ಸ್ಥಾಪನೆಯಾದ ವರ್ಷ
1. ಮೈಸೂರು ರಾಜ್ಯ ಸಾಹಿತ್ಯ ಅಕಾಡೆಮಿ	1961
2. ಕರ್ನಾಟಕ ಲಲಿತ ಕಲಾ ಅಕಾಡೆಮಿ	1964
3. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ	1977
4. ಕರ್ನಾಟಕ ನಾಟಕ ಅಕಾಡೆಮಿ	1977
5. ಕರ್ನಾಟಕ ಉರ್ದು ಅಕಾಡೆಮಿ	1977
6. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ	1980
7. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ	1994
8. ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ	1994
9. ಕರ್ನಾಟಕ ಶಿಲ್ಪಕಲಾ ಅಕಾಡೆಮಿ	1994
10. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ	1994

ಉದ್ದೇಶ:– ಪ್ರತಿಯೊಂದು ಅಕಾಡೆಮಿಯು ತನ್ನ ಕ್ಷೇತ್ರದಲ್ಲಿ ಅಧ್ಯಯನ ಮತ್ತು ಸಂಶೋಧನೆಗೆ ಉತ್ತೇಜನ ನೀಡುವುದು ಮಾಹಿತಿ ಸಂಗ್ರಹಣೆ ಕಾರ್ಯಮಾಡುವುದು, ತಮ್ಮ ಕ್ಷೇತ್ರದ ಪ್ರಶಸ್ತಿ ಪುರಸ್ಕಾರ ನೀಡುವುದು. ಪುಸ್ತಕ ಪ್ರಕಟಣೆ ಮಾಡುವುದು, ವಿಚಾರಣ, ಸಂಕಿರಣ, ಕಾರ್ಯಾಗಾರ, ಸಂವಾದ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಮತ್ತು ಸಮಾನ ಕ್ಷೇತ್ರದ ಸಂಘಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಜಾರಿಗೊಳಿಸುವುದು.

2) ಅ) ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

3) 1) ಆಯಾ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆ ಸಾಧನೆಯ ಆಧಾರದ ಮೇಲೆ ನೇಮಿಸಲಾಗುವುದು.

2) ಅಕಾಡೆಮಿಗಳ ಪುನಾರಚನೆಯ ಪ್ರಕ್ರಿಯೆ ಸಾಗಿದೆ.

4) ಅ) ಹೌದು.

ಆ) ಉದ್ಭವಿಸುವುದಿಲ್ಲ.

5) ಅನುವಾದ ಸಾಹಿತ್ಯ ಅಕಾಡೆಮಿ. (ಭಾಷಾ ಭಾರತಿ) ರಚನೆಯು ಪರಿಶೀಲನೆಯಲ್ಲಿದೆ.

329 (496) ಶ್ರೀ ರವೀಂದ್ರನಾಥ ಎಸ್.ಎ (ಮಾಯಕೊಂಡ):– ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾ ಬಲದಂಡೆ ಕಾಲುವೆ ಅಧುನೀಕರಣ ಮಾಡುವುದು ಅತೀ ಅವಶ್ಯಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ಹಾಲಿ ವ್ಯರ್ಥವಾಗುತ್ತಿರುವ ನೀರಿನ ಪರಿಮಾಣವೆಷ್ಟು?

ಈ) ಸದರಿ ಕಾಲುವೆಯ ಕೊನೆ ಭಾಗದ ಎಷ್ಟು ಎಕರೆಗಳಿಗೆ ನೀರು ಹರಿಯುತ್ತಿರುವುದಿಲ್ಲ?

ಉ) ಈ ಭಾಗಗಳಿಗೆ ನೀರು ಹರಿಯುವಂತಾಗಲು ತೆಗೆದುಕೊಂಡಿರುವ ಕ್ರಮಗಳೇನು?

ಊ) ಈ ಕಾಲುವೆಯಿಂದ ದಾವಣಗೆರೆ ನಗರದಲ್ಲಿರುವ ಕುಂದುವಾಡ ಕೆರೆಗೆ ನೀರು ಬಿಡಲು ಆದೇಶವಾಗಿರುವುದು ನಿಜವೇ?

ಋ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದ ನೀರನ್ನು ಬಿಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಬಂದಿದೆ.

ಆ) ಭದ್ರಾ ಬಲದಂಡೆ ಕಾಲುವೆಯ ಆಧುನೀಕರಣದ ಯೋಜನೆಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಕರ್ನಾಟಕ ನೀರಾವರಿ ನಿಗಮದ ಮೂಲಕ ನಿರ್ವಹಿಸಲು ಉದ್ದೇಶಿಸಲಾಗಿದೆ.

ಇ) ಕಾಲುವೆಗಳು ಅನ್‌ಲೈನ್ಡ್ ಆಗಿರುವುದರಿಂದ ಬಸಿಯುವಿಕೆ ಮತ್ತು ಅವಿಯಿಂದ ಬಲದಂಡೆ ಕಾಲುವೆಯಿಂದ 1115 ಕ್ಯೂಸೆಕ್ಸ್ ನೀರು ಮತ್ತು 100 ಕ್ಯೂಸೆಕ್ಸ್ ನೀರು ಕಾಲುವೆ ಕಟ್ಟಡಗಳ ಮೂಲಕ ಸೋರುವಿಕೆಯಿಂದ ವ್ಯರ್ಥವಾಗುತ್ತಿದೆ ಎಂದು ಅಂದಾಜಿಸಲಾಗಿದೆ.

ಈ) ಕಾಲುವೆಯ ಕೊನೆ ಭಾಗದ ಅಂದಾಜು 21,000 ಎಕರೆ ಪ್ರದೇಶಕ್ಕೆ ನೀರನ್ನು ಸಮರ್ಪಕವಾಗಿ ಪೂರೈಸಲಾಗುತ್ತಿಲ್ಲ.